

ಮೈಸೂರಿನ ಗುಂಗ್ರಾಲ್ ಛತ್ರದಲ್ಲಿನ ಜಮೀನಿನಲ್ಲಿ ಮೈಸೂರು ಮಲ್ಲಿಗೆ ಕೃಷಿಯಲ್ಲಿ ತೊಡಗಿರುವ ರೈತರು



ಮಲ್ಲಿಗೆ ಮಾಲೆ ಕಟ್ಟುತ್ತಿರುವ ವ್ಯಾಪಾರಿ

ಗಿಡ ಬೆಳೆಸುವ ವಿಧಾನ: ಡಿಸೆಂಬರ್ ಕೊನೆಯಲ್ಲಿ ಅಥವಾ ಜನವರಿ ಆರಂಭದಲ್ಲಿ ಮಲ್ಲಿಗೆ ಗಿಡದ ಕಡ್ಡಿಗಳನ್ನು ತುಂಡರಿಸಿ ನೆಡುತ್ತಾರೆ. 15 ದಿನ ಆ ಕಡ್ಡಿಗೆ ನೀರು ನೀಡದೆ, ಅದು ಒಣಗುವಂತೆ ಮಾಡುತ್ತಾರೆ. ನಂತರ ನಿಯಮಿತವಾಗಿ ನೀರು ನೀಡಿದಾಗ ಹೊಸ ಚಿಗುರು ಮೂಡುತ್ತದೆ. ಅವನ್ನು ಜಮೀನಿನಲ್ಲಿ ನೆಡುತ್ತಾರೆ. ಮಲ್ಲಿಗೆಯು ಕಡಿಮೆ ನೀರಾವರಿ ಬೇಡುವ ಕೃಷಿ ಆಗಿರುವುದರಿಂದ ಗುಡ್ಡ ಪ್ರದೇಶಗಳಲ್ಲಿ ಹೆಚ್ಚು ಬೆಳೆಯುತ್ತಾರೆ. ತಂಪಾದ ವಾತಾವರಣದಲ್ಲಿ ಮಲ್ಲಿಗೆ ಗಿಡಗಳು ಬೆಳೆಯುವುದಿಲ್ಲ. ಹೀಗಾಗಿ ಜೂನ್, ಜುಲೈನಲ್ಲಿ ಬೆಳೆ ಕೈಗೆ ಸಿಗುವುದಿಲ್ಲ. ಗಿಡ ನೆಟ್ಟಾದ ಬಳಿಕ 45 ದಿನಗಳಲ್ಲಿ ಹೂ ಬಿಡಲು ಆರಂಭವಾಗುತ್ತದೆ. ನಂತರ ನಾಲ್ಕರಿಂದ ಐದು ತಿಂಗಳು ಆ ಗಿಡಗಳಲ್ಲಿ ನಿರಂತರವಾಗಿ ಹೂ ಸಿಗುತ್ತವೆ. ಒಂದೇ ತೊಟ್ಟಿನಲ್ಲಿ 6–8 ಹೂಗಳು ಅರಳಿ, ದಟ್ಟವಾದ, ತೀವ್ರವಾದ ಪರಿಮಳವನ್ನು ಬೀರುತ್ತವೆ.

ಈ ಗಿಡಗಳು ದಟ್ಟವಾದ ಎಲೆಗಳನ್ನು ಹೊಂದಿರುವ ಪೊದೆ ಸಸ್ಯವಾಗಿದ್ದು, 5–6 ಅಡಿ ಎತ್ತರಕ್ಕೆ ಬೆಳೆಯುತ್ತದೆ. ಮೈಸೂರು ಮಲ್ಲಿಗೆಯು ಅರಳುವ ವೇಳೆ ಕಿಲೋಮೀಟರ್‌ಗಟ್ಟಲೆ ದೂರದವರೆಗೂ ಅದರ ಸುವಾಸನೆ ಹಬ್ಬುತ್ತದೆ. ಪರಿಮಳದ ಮೂಲಕವೇ ಮಲ್ಲಿಗೆ ಬೆಳೆಯುವ ಜಮೀನನ್ನು ಕಂಡುಹಿಡಿಯಬಹುದು.



ಮೇ 07ರ ಸಂಚಿಕೆಯ 'ಚೆನ್ನುಡಿ'
**'ಸಕ್ರಿ ಸಂಕೇಶ್ವರ' ಕೇಳಿ, ರವೀಂದ್ರ ವೀ ಮುನ್ನೋಳಿಮಠ ಅವರ ಧ್ವನಿಯಲ್ಲಿ...**

ಪಾಡ್‌ಕಾಸ್ಟ್ ಕೇಳಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಎಲ್ಲಾ ಕೃಷಿ ಬೆಳೆಯಂತೆ ಇದೂ ಮುಂಜಾನೆಯ ಶ್ರಮ ಬೇಡುತ್ತದೆ. ಬೆಳಿಗ್ಗೆ 11ರೊಳಗೆ ಮಾರುಕಟ್ಟೆಗೆ ಹೂ ನೀಡಿದರೆ ಉತ್ತಮ ಬೆಲೆ ದೊರೆಯುತ್ತದೆ. ಹೀಗಾಗಿ ಮುಂಜಾನೆಯಿಂದಲೇ ಮೊಗ್ಗುಗಳನ್ನು ಕೊಯ್ದು, ನಂತರ ಮಾರುಕಟ್ಟೆಗೆ ತೆರಳುತ್ತಾರೆ. ತಮಿಳುನಾಡಿನ ಮಲ್ಲಿಗೆಗಿಂತ ಮೈಸೂರು ಮಲ್ಲಿಗೆಗೆ ₹100 ಹೆಚ್ಚು ಬೆಲೆ ಇದೆ. ಯುಗಾದಿ, ಶಿವರಾತ್ರಿ ಹಾಗೂ ಹಬ್ಬ ಹರಿದಿನಗಳ ಸಮಯದಲ್ಲಿ ಈ ಮಲ್ಲಿಗೆಗೆ ಹೆಚ್ಚಿನ ಬೇಡಿಕೆ.

ಕೆಲವೆಡೆ ದೊಡ್ಡ ಪ್ರಮಾಣದಲ್ಲಿ ಮಲ್ಲಿಗೆ ಬೆಳೆದರೆ, ಮಹಿಳೆಯರು ಮನೆಯ ಬಳಿ ಸಣ್ಣ ಆದಾಯಕ್ಕಾಗಿ ಬೆಳೆಯುವುದನ್ನೂ ಕಾಣಬಹುದು. ಗೃಹಿಣಿಯರಿಗೆ ಸ್ವ ಉದ್ಯೋಗದ ಕನಸು ಸಾಕಾರ ಮಾಡಿದ ಕೀರ್ತಿ ಮಲ್ಲಿಗೆಯದ್ದು.

'ಶ್ರಮವಹಿಸಿ ದುಡಿದರೆ ಮೈಸೂರು ಮಲ್ಲಿಗೆ ಕುಟುಂಬ ನಿರ್ವಹಣೆಗೆ ದಾರಿ ಮಾಡಿಕೊಡುತ್ತದೆ. ಮಾರುಕಟ್ಟೆ ಬೆಲೆಯಲ್ಲಿ ಸ್ಥಿರತೆ ಇಲ್ಲದ ಕಾರಣ ರೈತರು ಆಸಕ್ತಿ ವಹಿಸುತ್ತಿಲ್ಲ. ಕೆಲವೊಮ್ಮೆ ಗಿಡಗಳಲ್ಲಿ ಚಿಟ್ಟೆ ಬಿದ್ದು ಹಾಳಾಗುತ್ತದೆ. ಹಿಂದೆ ಹಲವು ಎಕರೆ ಬೆಳೆಯುತ್ತಿದ್ದವರು, ಈಗ ಕೆಲವು ಗಿಡಗಳನ್ನಷ್ಟೇ ಇಟ್ಟುಕೊಂಡಿದ್ದಾರೆ' ಎಂದು ಡಿಎಂಜಿ ಹಳ್ಳಿಯ ಮಲ್ಲಿಗೆ ಬೆಳೆಗಾರ ಟಿ. ಕೃಷ್ಣಪ್ಪ ಹೇಳುತ್ತಾರೆ.

'ಮೈಸೂರು ಮಲ್ಲಿಗೆಯ ಪರಿಮಳಕ್ಕೆ ಅಲ್ಲಿನ ಮಣ್ಣಿನ ಗುಣವೇ ಕಾರಣ. ನೀರು ಸರಾಗವಾಗಿ ಬಸಿದು ಹೋಗುವ ಫಲವತ್ತಾದ ಕೆಂಪು ಗೋರು ಮಣ್ಣು ಈ ಬೆಳೆಗೆ ಅತ್ಯಗತ್ಯ. 27 ರಿಂದ 32 ಡಿಗ್ರಿ ಸೆಲ್ಸಿಯಸ್ ತಾಪಮಾನದಲ್ಲಿ ಮಾತ್ರ ಈ ಹೂವು ಸಮೃದ್ಧವಾಗಿ ಅರಳುತ್ತದೆ. ಹವಾಮಾನದಲ್ಲಿ ಸ್ವಲ್ಪ ಏರುಪೇರಾದರೂ ಇಳುವರಿ ಮೇಲೆ ಪರಿಣಾಮ ಬೀರುತ್ತದೆ' ಎನ್ನುವುದು ತೋಟಗಾರಿಕಾ ತಜ್ಞರ ಅಭಿಪ್ರಾಯ.

ತೋಟಗಾರಿಕೆ ಇಲಾಖೆಯ ಮೂಲಕ ಸರ್ಕಾರ 'ಮೈಸೂರು ಮಲ್ಲಿಗೆ' ಬೆಳೆಗೆ ಸೌಲಭ್ಯಗಳನ್ನು ನೀಡುತ್ತಿದೆ. ಸಬ್ಸಿಡಿ ಲಭ್ಯವಿದೆ. ಜಾಗೃತಿ ಮೂಡಿಸುವ ಕೆಲಸವೂ ನಡೆಯುತ್ತಿದೆ. ಇಂತಹ ಪಾರಂಪರಿಕ ಬೆಳೆ ಉಳಿಸಲು ಇನ್ನೂ ತೀವ್ರಗತಿಯ ಪ್ರಯತ್ನ ಅಗತ್ಯವಿದೆ ಎನ್ನುವುದು ಮಲ್ಲಿಗೆ ಬೆಳೆಗಾರರ ಅಭಿಮತ. ಸ್ಥಿರ ಮಾರುಕಟ್ಟೆ ಒದಗಿಸುವುದರ ಜೊತೆಗೆ, ಬೆಳೆಗಾರರನ್ನೂ ತಜ್ಞರ ಸಮಿತಿಯಲ್ಲಿ ಸೇರಿಸಿಕೊಳ್ಳಬೇಕು. ಆಗ ಬೆಳೆಗಾರರ ನೈಜ ಸಮಸ್ಯೆ ಸರ್ಕಾರಕ್ಕೆ ತಲುಪುತ್ತದೆ.

ಲಾಭದಾಯಕ ಬೆಳೆ ಆಗಿದ್ದರೂ, ಮೈಸೂರು ಮಲ್ಲಿಗೆ ಬೆಳೆಯುವ ವ್ಯಾಪ್ತಿ ಕಡಿಮೆಯಾಗುತ್ತಾ ಹೋಗುತ್ತಿದೆ. ಜಿಲ್ಲೆಯಲ್ಲಿನ ಕೆಲವೇ ಹಿರಿಯ ಬೆಳೆಗಾರರಿಗೆ ಇದರ ಬಗ್ಗೆ ಸಂಪೂರ್ಣ ಮಾಹಿತಿ ಇದೆ. ಅವರ ಕಾಲಘಟ್ಟದಲ್ಲೇ ಯುವ ಕೃಷಿಕರು 'ಮೈಸೂರು ಮಲ್ಲಿಗೆ' ಕುರಿತು ತಿಳಿದು ಕೃಷಿ ಪರಂಪರೆ ಮುಂದುವರೆಸಬೇಕಿದೆ. ■



ಮೈಸೂರು ಮಲ್ಲಿಗೆ ಖರೀದಿ ಜೋರು